ಒ.ಎಸ್.ನಂಃ66/2018
ಪಿ.ಡಬ್ಲ್ಯೂ.3

**ದಿಃ01.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:**-ಪ್ರತಿವಾದಿ ಪರ ವಕೀಲರಿಂದಃ-

ಈ ದಾವೆಯನ್ನು ವಾದಿ ಪ್ರತಿವಾದಿಯ ವಿರುದ್ದ ಯಾವ ಕಾರಣಕ್ಕಾಗಿ ಹೂಡಿರುತ್ತಾರೆ ನನಗೆ ಗೊತ್ತಿರುತ್ತದೆ. ವಾದಿ ಜಮೀನಿನ ಬಗ್ಗೆ ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ. ದಿಃ03/03/2016 ರಂದು ಪ್ರತಿವಾದಿ ನನಗೆ ಜಮೀನು ಖರೀದಿ ಮಾಡುವುದು ಇದೇ ಸಾಕ್ಷಿ ಎಂದು ಸಹಿ ಮಾಡಲು ಕರೆದುಕೊಂಡು ಹೋಗಿದ್ದರು. ದಾವಾ ಜಮೀನು ರಿ.ಸ.ನಂಃ84/3 ಜಮೀನಿನ ಈ ಮುಂಚೆ ಆಗಿರುವ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಿಃ03/03/2016 ರಂದು ಕ್ರಯ ಪತ್ರ ಬರೆಯುವ ಕಾಲಕ್ಕೆ ನನ್ನ ಜೊತೆ ವಾದಿ ಮತ್ತು ಪ್ರತಿವಾದಿ ಮಾತ್ರ ಇದ್ದರು, ಬೇರೆ ಯಾರು ಇರಲಿಲ್ಲ. ರತ್ನಮ್ಮ ಇವರ ಆರೋಗ್ಯ ಸನ್ 2015 ರಿಂದ ಸರಿ ಇರಲಿಲ್ಲ ಎಂದು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಅವರು 2015 ರಿಂದ ಯಾವ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ದಿಃ03/03/2016 ರಂದು ನಾನು ಮತ್ತು ರತ್ನಮ್ಮ ದಿದ್ದಿಗಿ ಗ್ರಾಮದಿಂದ ಬಂದಿರುತ್ತೇವೆ. ವಾದಿ ಭಾರತಮ್ಮ ಇವರು ಚಿತ್ರದುರ್ಗದಿಂದ ಜಗಳೂರಿಗೆ ಬಂದಿರುತ್ತಾರೆ. ರತ್ನಮ್ಮ ಇವರಿಗೆ ನಾನು ಪ್ರತಿವಾದಿ ಹೇಳಿದ ಪ್ರಕಾರ ಉಪನೊಂದಣಾಧಿಕಾರಿಯವರ ಕಛೇರಿ, ಜಗಳೂರಿಗೆ ಕರೆದುಕೊಂಡು ಬಂದಿರುತ್ತೇನೆ. ಆ ದಿನ ನಾವು ದಿದ್ದಿಗಿಯಿಂದ ಬಸ್ ಗೆ ಬಂದಿರುತ್ತೇವೆ. ಜಗಳೂರು ಬಸ್ ನಿಲ್ದಾಣದಿಂದ ಉಪನೊಂದಣಾಧಿಕಾರಿ ಕಛೇರಿಗೆ ನಾನು ಮತ್ತು ರತ್ನಮ್ಮ ನಡೆದುಕೊಂಡು ಹೋಗಿರುತ್ತೇವೆ. ದಿಃ03/03/2016 ರಂದು ರತ್ನಮ್ಮ ಇವರು ಪ್ರತಿವಾದಿಗೆ ಪೋನ್ ಮಾಡಿ ಉಪನೊಂದಣಾಧಿಕಾರಿ ಕಛೇರಿಗೆ ಬನ್ನಿ ನಾನು ನಿಮ್ಮ ಹೆಸರಿಗೆ ದಾವಾ ಆಸ್ತಿಗಳ ಬಗ್ಗೆ ದಾನ ಪತ್ರವನ್ನು ಬರೆದುಕೊಡುತ್ತೇನೆ ಎಂದು ಹೇಳಿ ಕರೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ ನಿ.ಪಿ.18 ದಾನ ಪತ್ರದಲ್ಲಿ ನಮೂದಿಸಿರುತ್ತಾರೆ ಮತ್ತು ಸದರಿ ದಾನಪತ್ರವನ್ನು ನಾನು ಮತ್ತು ಇನ್ನೊಬ್ಬ ಸಾಕ್ಷಿದಾರರಾದ ಹನುಮಂತಪ್ಪ ಓದಿ ತಿಳಿದುಕೊಂಡು ಸಹಿ

ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ವಾದಿಯವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ

**ಸಿವಿಲ್ ನ್ಯಾಯಾಧೀಶರು, ಜಗಳೂರು**